60401

# ನಾಲ್ಕನೆಯ ಚತುರ್ಮಾಸ ಬಿ.ಎ ಪರೀಕ್ಷೆಗಳು – ಜುಲೈ/ಆಗಸ್ಟ್ 2023

## ಸ್ಕೀಮ್: ಸಿಬಿಸಿಎಸ್

010

## ಕನ್ನಡಭಾಷೆ

## ಕಲಾ ಸೌರಭ – ೪

ಸಮಯ: 3 ಗಂಟೆ | ಗರಿಷ್ಠ ಅಂಕ: 80

### ಕಾವ್ಯ ಭಾಗ (50 ಅಂಕಗಳು)

1.ಅ. ಒಂದು ಪದ್ಯದ ಭಾವವನ್ನು ಸಂದರ್ಭಸಹಿತ ವಿವರಿಸಿ. 1x5=5

೧. ಕುರುಕುಲ ಜೀವಾಕರ್ಷಣ
ಪರಿಣತಮಿದು ಕಾಳಹಸ್ತಮಲ್ಲದೆ ಪರಮೇ
ಶ್ವರಿ ಕೇಶಹಸ್ತಮಕ್ಕುಮೆ
ಪರಾಭವಜ್ವಲನ ಧೂಮಕೃಷ್ಣಂ ಕೃಷ್ಣೇ

೨. ದೂರದಿಂದಲೇ ನೋಡಿದ ಕರ್ಣನು
ದಡಬಡನೆದ್ದು ಓಡಿಬಂದು!
"ಪೂಜ್ಯರೇ ದಯಮಾಡಿಸಬೇಕು
ಈ ವೇಳೆಯಲ್ಲಿ ಇಷ್ಟುದೂರ ಪಾದ ಬೆಳುಸ್ತಲ್ಲ
ಬಂದ ಸಮಾಚಾರವೇನು?
ದಯಮಾಡಿ ಅಪ್ಪಣೆ ಮಾಡಬೇಕು"

ಆ. ಒಂದು ವಾಕ್ಯದಲ್ಲಿ ಉತ್ತರಿಸಿ. 5x1=5

೧. ಪಂಪ ಮಾಹಾಕವಿಯು ಬರೆದ ಧಾರ್ಮಿಕ ಕಾವ್ಯವನ್ನು ಹೆಸರಿಸಿ.
೨. ಉಪರಂಭೆಯ ಪತಿಯ ಹೆಸರೇನು?
೩. ಪರಾಂಗನಾ ವಿರತಿ ವ್ರತವನ್ನು ಆಚರಿಸುತ್ತಿದ್ದವರು ಯಾರು?
೪. ವೈಶಂಪಾಯನ ಸರೋವರದಲ್ಲಿ ಅಡಗಿಕೊಂಡಿದ್ದವರು ಯಾರು?
೫. ಜನಪದ ಮಹಾಭಾರತವನ್ನು ಸಂಪಾದಿಸಿ ಪ್ರಕಟಿಸಿದ ಜಾನಪದ ವಿದ್ವಾಂಸರು ಯಾರು?

2. ನಾಲ್ಕು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ 4x2½=10

೧. ಇದು ಪಾತಾಳ ಬಿಲಕ್ಕೆ ಬಾಗಿಲ್
೨. ಅಗ್ನಿಮುಖದೆ ಪುಟ್ಟಿದುದಜೆಂದೆ ಶರಣಾಗ್ನಿ ಮುಖಂ
೩. ಮದಕರಿಯಂ ಮೃಗವೈರಿ ಪಿಡಿವ ತೆಱದಿಂ ಪಿಡಿದಂ
೪. ಮುಟ್ಟಿದ ಮನಮಂ ತೊಟ್ಟನೆ ಪಸಾಯ ದಾನಂಗೊಟ್ಟಳ್
೫. ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು
೬. "ಮಾವ ನಿನಮಾತ ಕೇಳಿ ಮಾನ ಹೋಯ್ತು"

ಪು.ತಿ.ನೋ

**3.** ಅ. ಎರಡು ವಿಷಯಗಳಿಗೆ ಸ್ವಂತ ಅಭಿಪ್ರಾಯವನ್ನು ಬರೆಯಿರಿ. **2x4=8**

೧. ಚಿತ್ರಮಾಲೆ

೨. ಎಂಕ್ಟೇಸಯ್ಯ

೩. ಶಕುನಿ

೪. ವೈಶಂಪಾಯನ ಸರೋವರ

ಆ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. **4x½=2**

ಬಟ್ಟೆ, ಪುಸಿ, ಅನಲಾ, ಪರಾಭವ, ಮೃಗ, ಕತ್ತುರಿ, ಕಾಟ, ಕಬ್ಬಿಗ

**4.** ಒಂದು ಪ್ರಶ್ನೆಗೆ ಉತ್ತರಿಸಿ: **1x10=10**

೧. 'ಸುಯೋಧನ ಅಭಿಮಾನವನ್ನು ಪಂಪ ನಿರೂಪಿಸಿರುವ ರೀತಿಯನ್ನು ಕುರಿತು ಬರೆಯಿರಿ.

೨. ಶೀಲಪರಿಪಾಲನಂ ಮಾಟ್ಟಿದು – ಕಾವ್ಯಭಾಗದಲ್ಲಿ ರಾವಣನ ವ್ಯಕ್ತಿತ್ವವನ್ನು ನಾಗಚಂದ್ರ ಚಿತ್ರಿಸಿದ ಬಗೆಯನ್ನು ವಿವರಿಸಿ.

**5.** ಎರಡು ಪ್ರಶ್ನೆಗಳಿಗೆ ಉತ್ತರಿಸಿ: **2x5=10**

೧. ಭೀಮ – ದ್ರೌಪದಿಯರ ಸಂಭಾಷಣೆಯ ಸ್ವಾರಸ್ಯವನ್ನು ಸಂಕ್ಷಿಪ್ತವಾಗಿ ಬರೆಯಿರಿ.

೨. ಜನ್ನ ಕವಿ ಚಿತ್ರಿಸಿದ ಅಷ್ಟವಂಕನ ರೂಪವಿಕಾರವನ್ನು ಕುರಿತು ಬರೆಯಿರಿ.

೩. ಆಂಡಯ್ಯ ವರ್ಣಿಸಿರುವ ಕನ್ನಡ ನಾಡಿನ ವರ್ಣನೆಯನ್ನು ವಿವರಿಸಿ.

೪. ಕರ್ಣನ ದಾನಗುಣದ ಮಹತ್ವವನ್ನು ತಿಳಿಸಿ.

**ಪ್ರಬಂಧ ಮತ್ತು ಭಾಷಾ ಭಾಗ (30 ಅಂಕಗಳು)**

**6.** ಒಂದು ಪ್ರಶ್ನೆಗೆ ಉತ್ತರಿಸಿ: **1x10=10**

೧. ಪ್ರೀತಿಯೇ ಮೋಕ್ಷದ ಮಹಾಮಾರ್ಗವೆಂಬ ಸತ್ಯವು ಲಂಕೇಶರ ಲೇಖನದಲ್ಲಿ ಹೇಗೆ ಅನಾವರಣವಾಗಿದೆ? ವಿವರಿಸಿ.

೨. ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಭಾರತೀಯ ಸಂಸ್ಕೃತಿಯ ಒಳನೋಟವನ್ನು ನೇಮಿಚಂದ್ರರ 'ನೀರುಕೊಡದ ನಾಡಿನಲ್ಲಿ' – ಲೇಖನ ಹೇಗೆ ತೆರೆದಿಟ್ಟಿದೆ? ವಿವರಿಸಿ.

**7.** ಒಂದು ಪ್ರಶ್ನೆಗೆ ಉತ್ತರಿಸಿ: **1x10=10**

೧. ಉಪಘಾತ!! ಪ್ರಬಂಧದಲ್ಲಿ ಮೂಡಿಬಂದಿರುವ ಹಾಸ್ಯವನ್ನು ವಿವರಿಸಿ.

೨. ಭಾಷಣ ಮತ್ತು ನಿರೂಪಣೆಯ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.

**8.** ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: **2x5=10**

೧. ನುಡಿಗಟ್ಟು ಎಂದರೇನು? ಉದಾಹರಣೆ ಸಹಿತ ನಿರೂಪಿಸಿ.

೨. ಪತ್ರಲೇಖನವೆಂದರೇನು? ಪತ್ರದ ವಿಧಗಳನ್ನು ವಿವರಿಸಿ.

೩. ಡಿಜಿಟಲ್ ಕನ್ನಡ – ಮತ್ತು ಯೂನಿಕೋಡ್ ತಂತ್ರಾಂಶಗಳ ಬಗ್ಗೆ ಬರೆಯಿರಿ.

೪. ಅಂತರ್ಜಾಲದಲ್ಲಿ ಕನ್ನಡ ಕಟ್ಟುವ ಬಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

** *** **

MFGC LIBRARY